**ಚಾಸಾಃ 4 ಪ್ರಾಸಾಃ 4**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ**

**ಸಿಸಿ ಸಂಖ್ಯೆ: 822/2017**

| | | |
|---|---|---|
| ಹೆಸರು | : | ಗೋಪಾಲ ಗೌಡ |
| ತಂದೆಯ ಹೆಸರು | : | ರುಕ್ಮಯ್ಯ ಗೌಡ |
| ಪ್ರಾಯ | : | 56 ವರ್ಷ |
| ಉದ್ಯೋಗ | : | ಕೃಷಿ |
| ವಾಸ | : | ಸವಣಾಲು ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 17.03.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ದಿಃ 8.6.2017 ರಂದು 8.30 ಗಂಟೆಗೆ ನನಗೆ ಚಾಸಾ1 ರವರು ನನಗೆ ದೂರವಾಣಿ ಕರೆ ಮಾಡಿ ನಮ್ಮ ಆಪರೇಟರ್ ಆದ ಪ್ರಶಾಂತ, ನವೀನ, ಯತೀಶ ರವರಿಗೆ ಅಪಘಾತವಾಗಿದೆ, ಕೂಡಲೇ ಅಭಯ ಆಸ್ಪತ್ರೆಗೆ ಬರಬೇಕೆಂದು ಹೇಳಿದ್ದರು. ವಿಚಾರ ತಿಳಿದು ನಾನು ಅಭಯ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ಯತೀಶ, ನವೀನ ಮತ್ತು ಪ್ರಶಾಂತ್ ರವರು ದಾಖಲಾಗಿದ್ದರು. ಪ್ರಶಾಂತ ರವರ ಎರಡು ಕಾಲು ಮತ್ತು ಹೊಟ್ಟೆಗೆ ಪೆಟ್ಟಾಗಿತ್ತು. ಯತೀಶ ರವರಿಗೆ ಸ್ವಲ್ಪ ತರಚಿದ ಗಾಯಗಳಾಗಿದ್ದವು. ನವೀನ ರವರಿಗೆ ಕಾಲು ಮೂಳೆ ಮುರಿತ ಉಂಟಾಗಿತ್ತು. ನಂತರ ಅಪಘಾತವು ರೇಷ್ಮೇ ರಸ್ತೆಯಲ್ಲಿ ಆಗಿದೆ ಎಂದು ಗೊತ್ತಾಗಿರುತ್ತದೆ. ಸ್ವಿಫ್ಟ್ ವಾಹನವನ್ನು ಅದರ ಚಾಲಕ ಅಮಲು ಪದಾರ್ಥವನ್ನು ಸೇವಿಸಿ ತಪ್ಪು ಬದಿಗೆ ಬಂದು ನವೀನ ರವರ ಗಾಡಿಗೆ ಡಿಕ್ಕಿ ಹೊಡೆದು ನಂತರ ಚರಂಡಿಗೆ ಹೋಗಿ ಬಿದ್ದ ಬಗ್ಗೆ ತಿಳಿಸಿರುತ್ತಾರೆ. ನಂತರ ಕಾರು ಚಾಲಕ ಅಲ್ಲಿಂದ ಪರಾರಿಯಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ನಾನು ಅಭಯ ಆಸ್ಪತ್ರೆಯಲ್ಲಿ ಪ್ರಶಾಂತ ಮತ್ತು ಯತೀಶ್ ರವರನ್ನು ಮಂಗಳೂರು ಎ.ಜೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನವೀನ್ ರವರನ್ನು ಚಂದ್ರಕಾಂತ ರವರು

ಮಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ.

ಪಾಟೀ ಸವಾಲುಃ 1ನೇ ಆರೋಪಿ ಪರ ಕುಮಾರಿ. ವೈ.ಎಸ್.ಕೆ ವಕೀಲರಿಂದಃ

ವಿಚಾರ ತಿಳಿದು ತಕ್ಷೀರು ಸ್ಥಳಕ್ಕೆ ಹೋಗಿದ್ದೀರಾ ಎಂದರೆ ಇಲ್ಲ. ತಕ್ಷೀರಿಗೆ ಸಂಬಂಧಪಟ್ಟಂತೆ ಯಾವ ಯಾವ ವ್ಯಕ್ತಿಗಳು ಯಾವ ಯಾವ ಬೈಕಿನಲ್ಲಿ ಹೋಗುತ್ತಿದ್ದರು ಎಂಬ ವಿಚಾರ ನನಗೆ ಗೊತ್ತಿಲ್ಲ. ಅಪಘಾತಪಡಿಸಿ ಕಾರನ್ನು ಯಾರು ಚಲಾಯಿಸುತ್ತಿದ್ದರು ಎಂದು ಗೊತ್ತು ಆದರೆ ನಾನು ನೋಡಿರುವುದಿಲ್ಲ. ಸ್ವಿಫ್ಟ್ ವಾಹನದ ಮಾಲಿಕರು ಯಾರು ಎಂದು ನನಗೆ ಗೊತ್ತಿಲ್ಲ. ಕಾರು ಉಪ್ಪಿನಂಗಡಿಯಿಂದ ಈಕಡೆ ಬರುತ್ತಿತ್ತು ಎಂದು ತಿಳಿಸಿರುತ್ತಾರೆ. ತಪ್ಪು ಬದಿಯಲ್ಲಿ ಬಂದು ಡಿಕ್ಕಿ ಹೊಡೆದಿದೆ ಎಂದು ನಮಗೆ ತಿಳಿಸಿರುತ್ತಾರೆ. ಆ ಸಮಯದಲ್ಲಿ ಬೈಕ್ ಸವಾರರು ಎಡಬದಿಯಲ್ಲಿ ಹೋಗುತ್ತಿದ್ದರು ಎಂದು ತಿಳಿಸಿರುತ್ತಾರೆ, ನಾನು ನೋಡಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಪಟ್ಟಂತೆ ನನಗೆ ಯಾವುದೇ ಮೂಲ ಮಾಹಿತಿ ಇರುವುದಿಲ್ಲ, ಆಸ್ಪತ್ರೆಗೆ ಹೋದಾಗ ಹೇಳಿ ಗೊತ್ತಾಗಿರುತ್ತದೆ. ಮೃತ ಪ್ರಶಾಂತ್ ರವರ ಮೇಲೆ ಯಾವುದೇ ಕಾರು ಚಲಾಯಿಸಿಲ್ಲ ಎಂದರೆ ಸರಿಯಲ್ಲ. ಆದರೆ ನಾನು ನೋಡಿರುವುದಿಲ್ಲ. ಗಾಯಾಳು ಮತ್ತು ಮೃತರು ನಮ್ಮ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ 1ನೇ ಆರೋಪಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

(2ನೇ ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ)

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)